ತನ್ನ ಡೈಲಾಗುಗಳಿಂದಲೇ ಕಿರಣನನ್ನು ಮಾನಸಿಕವಾಗಿ ಕುಗ್ಗಿಸಿ ಕೆಳಕ್ಕಿಳಿಸಿದ್ದಾನೆ. ಆತ ಏನನ್ನಾದರೂ ಪ್ರಯತ್ನಿಸುವುದಕ್ಕೂ ಅವಕಾಶ ನೀಡಿಲ್ಲ. ಅಷ್ಟೂ ಸಮಯ ಕಿರಣ ಅದೆಂಥ ಟಾರ್ಚರು, ಮಾನಸಿಕ ಕಿರಿಕಿರಿ ಅನುಭವಿಸಿದನೆಂದರೆ ಏನನ್ನಾದರೂ ತಗೊಂಡು ಹೋಗ್ಲಿ ಅತ್ಲಾಗೆ... ಸದ್ಯಕ್ಕೆ ಹೋಗಗೊಟ್ಟರೆ ಸಾಕು ಅನ್ನಿಸಿದೆ. ''ಜೀವನದಲ್ಲೇ ಅಂಥ ಸಂದರ್ಭ ಮತ್ತೆ ಬರಬಾರ್ದು ಅನ್ಕೊತೀನಿ ಸಾರ್... ಆತ ಇದ್ದ ಎಲ್ಲವನ್ನು ಮೈ ಕೂಡ ಮುಟ್ಟದೆ ಇಸ್ಕೊಂಡು ಹೋದ. ಹೋದೋನ್ ಹೋದ. ಆ ನಂತರವೂ ಸುಮಾರು ಹದಿನೈದಿಪ್ಪತ್ತು ನಿಮಿಷ ನನ್ನ ತಲೇನೇ ಕೆಲ್ಸ ಮಾಡ್ತಿರಲಿಲ್ಲ. ಷಾಕ್‌ಗೆ ಒಳಗಾದವನಂತೆ ಕುಳಿತೇ ಇದ್ದೆ. ಆತ ಏನು ಮಾಡಬೇಕೆಂದುಕೊಂಡಿದ್ನೋ ಅದೆಲ್ಲವನ್ನೂ ಮಾಡಿದ. ಬರಿಯ ಬಾಯಿ ಮಾತ್ನಲ್ಲೇ ಮಾಡಿದ. ವೆಪನ್ನು ಇದ್ರೂ ಬಳಸಲಿಲ್ಲ. ಅವನು ಕಟ್ಟಿದ ಆಕ್ಸಿಡೆಂಟು, ಗಾಯಾಳುವಿನ ಕಥೆ ಎಲ್ಲವೂ ಸುಳ್ಳು ಅಂತ ನನಗೆ ಗೊತ್ತಿತ್ತು. ನಾನು ಅದನ್ನ ನಂಬ್ತಾ ಇಲ್ಲ ಅನ್ನೋ ಸಂಗ್ತಿ ಅವ್ನಿಗೂ ಗೊತ್ತಿತ್ತು. ಆದ್ರೂ ತಲೆಕೆಡಿಸಿಕೊಳ್ಳದವ್ನಂತೆ ಹೇಳ್ತಲೇ ಹೋದ. ಸಂದರ್ಭಾನ ಪೂರ್ಣವಾಗಿ ಕೈವಶ ಮಾಡಿಕೊಳ್ಳೋದು ಅಂದ್ರೆ ಇದೇ. ಬಹುಶಃ ಆತ ಒಳ್ಳೇ ಸೈಕಾಲಜಿಸ್ಟ್ ಅನ್ಸುತ್ತೆ. ತನ್ನ ಬಾಡಿ ಲಾಂಗ್ವೇಜು, ಭಾಷೆ ಶೈಲಿಗಳಿಂದಲೇ ಎದುರಿನವನನ್ನು ಹೇಗೆ ಹಣಿದು ಹೈರಾಣು ಮಾಡಬೇಕೆನ್ನುವ ಕಲೇನ ಅವನಿಂದ್ಲೇ  ಕಲೀಬೇಕು. ಯಾವುದೇ ತಂತ್ರವಿರಲಿ, ಒಬ್ಬ ಮನುಷ್ಯನನ್ನು ಅಷ್ಟು ಹೊತ್ತು ಕೈಗೊಂಬೆಯಂತೆ ಆಡಿಸುವುದಿದೆಯಲ್ಲಾ... ಆ ಟ್ಯಾಲೆಂಟ್‌ನ ಮೆಚ್ಲೇಬೇಕು ಸಾರ್...''

ಕಿರಣನ ಮಾತು ಕೇಳುತ್ತಾ ಬಹುಶಃ ಈತ ಅವನ ಅಭಿಮಾನಿ ಆಗಿಬಿಟ್ಟಿದ್ದಾನಾ ಅನ್ನುವ ಸಂದೇಹ ಸುಳಿದದ್ದು ಸುಳ್ಳಲ್ಲ.

ಇನ್ನೊಂದು ಘಟನೆ ನಡೆದದ್ದು ನಗರದ ಹೃದಯ ಭಾಗದಲ್ಲಿರುವ ಸ್ಲಂ ಒಂದರಲ್ಲಿ. ಆ ಅಜ್ಜಿ ತಾತ ಇಬ್ಬರೂ  ಸಣ್ಣದೊಂದು ಪೆಟ್ಟಿಗೆ ಅಂಗಡಿಯನ್ನಿಟ್ಟುಕೊಂಡಿದ್ದರು. ವ್ಯಾಪಾರವೂ ಚೆನ್ನಾಗಿಯೇ ಇತ್ತು. ಅಜ್ಜಿಗೆ ಒಡವೆಗಳ ಮೇಲೆ ಅದೇನು ಮೋಹವೋ? ಅಂಗಡಿಯಲ್ಲಿ ಕುಳಿತಿರುವಾಗಲೂ ಮೈಮೇಲೆ ಹೇರಿಕೊಂಡಿರಬೇಕು. ಒಮ್ಮೆ ಸಿಗರೇಟು ಕೊಳ್ಳಲು ಬಂದವನೊಬ್ಬ ಅಜ್ಜಿಯನ್ನು ನೋಡಿ "ಅಜ್ಜೀ... ಸರ್ಕಾರ ನಿಮಗೆ ವೃದ್ಧಾಪ್ಯ ವೇತನ ಕೊಡ್ತಾ ಇಲ್ವಾ?" ಅಂತ ವಿಚಾರಿಸಿದ್ದಾನೆ. "ನಾವೇನು ದುಡಿಯೋರಾ? ಅಥವಾ ಗೌರ್ಮೆಂಟು ನೋಕರರಾ?... ನಮಗೆಂತದಪ್ಪಾ ವೇತನಾ?" ಅಂತ ಅಜ್ಜ ನಿಟ್ಟುಸಿರಿಟ್ಟಿದೆ. ಅವನು ನಿರೀಕ್ಷಿಸಿದ್ದೂ ಅಂಥಾ ಉತ್ತರವೇ. "ಎಂತ ನಷ್ಟ ಮಾಡ್ಕೊಂಡ್ರಿ ತಾತ?... ತಿಂಗ್ಳ ತಿಂಗ್ಳ ಸಂಬಳ ಬಂದಂಗೆ ಬರ್ತದೆ... ಸರ್ಕಾರದ ದುಡ್ಡು. ಯಾರ್ಯಾರೋ ತಿಂತಾರಂತೆ... ನನ್ನ ಸ್ನೇಹಿತನೇ ಇರೋದು ಆಫೀಸಲ್ಲಿ... ನೀನ್ ಸುಮ್ನೇ ಬಾರಜ್ಜಿ... ತಾತನ ಮಾತು ಕೇಳ್ಕೊಂಡು ಕೂರಬ್ಯಾಡ. ಈಗ್ಲೇ ಕರ್ಕೊಂಡು ಹೋಗಿ ರಿಜಿಸ್ಟ್ರು ಮಾಡಿಸಿಬಿಡ್ತೀನಿ... ನಿಮ್ಗೆ ಅನುಕೂಲ ಆಯ್ತಂದ್ರೆ ನನ್ಗೂ ಸ್ವಲ್ಪ ಪುಣ್ಯ ಬರ್ತದೆ..." ಅಂತ ಬ್ಯಾಟು ಬೀಸಿದ್ದಾನೆ. ಬಾಲು ತಿರುತಿರುಗಿ ಬಂದು ಬ್ಯಾಟಿಗೇ ಬಡಿದಿದೆ. ನೋಡನೋಡುತ್ತಿದ್ದಂತೆ ಅಜ್ಜಿ ಅವನನ್ನ ನಂಬಿ ತರಾತುರಿಯಲ್ಲಿ ತಯಾರಾಗೇಬಿಟ್ಟಿತಲ್ಲ... ಇದೇ ಅಲ್ಲವೇ ವಶೀಕರಣ ಅಂದರೆ. ಅಷ್ಟಾದ್ರೂ ತಾತ, "ಸ್ವಲ್ಪ ಸ್ನೇಹಿತರ ಹತ್ರ ವಿಚಾರ ಮಾಡೋಣ ಇರೇ ಅಮ್ಮೀ... ನಾಳೆ ನಾಡಿದ್ದು ಹೋದರೆ ಆಯ್ತು. ಈ ಬಗ್ಗೆ ನಾನು ಕೇಳೇ ಇಲ್ಲ..." ಅಂತ ಕೊಸರಿದೆ. "ಹಂಗೆಲ್ಲಾ ಲೇಟು ಮಾಡ್ಕತಾ ಕುಂತ್ರೆ ಆಗಲ್ಲ ತಾತ... ವರ್ಷಕ್ಕೆ ಇಷ್ಟು ಜನ ಅಂತ ಫಿಕ್ಸು ಮಾಡಿರ್ತಾರೆ. ಬೇಡ ಅಂದ್ರೆ ಬಿಟ್ಬಿಡಿ,